ಗಳಿಸಬೇಕು ಎನ್ನುವ ಆಸೆಯಲ್ಲಿದ್ದ ಅವನಿಗೆ ಈ ಕೇಸ್ ಅಷ್ಟೊಂದು ಮಹತ್ವದ್ದು ಅನ್ನಿಸುತ್ತಿರಲಿಲ್ಲ. ಬಹುಶಃ ತನ್ನ ಉತ್ಸಾಹ ಹೆಚ್ಚಿಸಲು ಪೂಜಾರಿ ಇದನ್ನು ದೊಡ್ಡ ಕೇಸ್ ಎಂದು ಬಿಂಬಿಸುತ್ತಿದ್ದಾನೆ ಎನಿಸುತ್ತಿತ್ತು. ಅದಲ್ಲದೆ, ಬೆಳಗ್ಗಿನಿಂದ ನಾಲ್ಕು ಬಾರಿ ಫೋನ್ ಮಾಡಿದರೂ ಪೂಜಾರಿ ಅದಕ್ಕೆ ಸರಿಯಾಗಿ ಉತ್ತರಿಸದೇ ತಾನು ಬರುವವರೆಗೂ ಕಾಯುತ್ತಿರು ಎಂದಷ್ಟೇ ಹೇಳುತ್ತಿದ್ದ.

ಸುಮಾರು ಒಂದು ಗಂಟೆಯ ಹೊತ್ತಿಗೆ ಪೂಜಾರಿ ಸ್ಟೇಶನ್‌ಗೆ ಬಂದ. ಅಷ್ಟು ಹೊತ್ತಿಗೆ ತನ್ನ ಸಹನೆ ಕಳೆದುಕೊಂಡಿದ್ದ ಜಗದೀಶ ಅವನ ಮುಂದೆ ಬಂದುಕುಳಿತು, 'ಸರ್, ಸದಾನಂದ ಹಿಂದಿನ ಮನೆಯಲ್ಲಿ ಕೇವಲ ಆರು ತಿಂಗಳು ಮಾತ್ರ ಇದ್ದ. ಬಾಡಿಗೆ ಸರಿಯಾಗಿ ಕೊಟ್ಟಿಲ್ಲ ಅಂತ ಓಡಿಸಿದರಂತೆ. ಅಕ್ಕ ಪಕ್ಕದ ಮನೆಯವರು ಮಂಗಳಾ ಎನ್ನುವವಳನ್ನು ಅವರು ಮನೆ ಬಿಡುವ ಹದಿನೈದು–ಇಪ್ಪತ್ತು ದಿನಗಳ ಹಿಂದಿನಿಂದ ನೋಡಿದ್ದಾರಷ್ಟೇ... ಅವಳನ್ನು ಯಾರೂ ಮಾತಾಡಿಸಿಲ್ಲ... ಸುಮತಿ ತನ್ನ ತಂಗಿ ಅಂತಾ ಹೇಳಿದ್ದಳಂತೆ. ಸುಮತಿ ಕೂಡಾ ಅಲ್ಲಿ ಇದ್ದಷ್ಟು ದಿನ ಯಾರೊಂದಿಗೂ ಅಷ್ಟಾಗಿ ಮಾತಾಡುತ್ತಿರಲಿಲ್ಲವಂತೆ.'

'ಸುಮತಿಯ ಮನೆ ಕಡೆಯವರು ಯಾರಾದರೂ ಬಂದು ಗಲಾಟೆ ಮಾಡಿದ್ದರಂತಾ...'

'ಇಲ್ಲ ಸರ್, ಅದಲ್ಲದೇ ಇವರಿಬ್ಬರೂ ತಮ್ಮ ಪಾಡಿಗೆ ತಾವಿದ್ದರಂತೆ. ಯಾರೊಂದಿಗೂ ಮಾತಿಲ್ಲ ಕತೆ ಇಲ್ಲ...'

'ಇದೆಲ್ಲ ನೋಡಿದರೆ ನಮ್ಮಿಂದ ಏನೋ ತಪ್ಪಾಗುತ್ತಿದೆ ಜಗದೀಶ್. ಆ ಹುಡುಗಿ ನಿಜವಾಗಿಯೂ ಕಿಡ್ನಾಪ್ ಆಗಿದ್ದರೆ ಅದು ಕೇವಲ ವೈಯಕ್ತಿಕ ದ್ವೇಷದಿಂದ ಮಾತ್ರ ಆಗಿರಲು ಸಾಧ್ಯ. ಐದು ಲಕ್ಷ ರೂಪಾಯಿ ಕೊಡಿ ಎಂದು ಫೋನ್ ಮಾಡಿರುವುದೆಲ್ಲ ನಮ್ಮನ್ನು ದಿಕ್ಕು ತಪ್ಪಿಸಲು ಹೇಳಿರುವ ಕಥೆ ಎನಿಸುತ್ತಿದೆ... ಆ ಫೋನ್ ಎಲ್ಲಿಂದ ಬಂದಿತ್ತು, ಯಾರು ಮಾಡಿದ್ದು ಅಂತಾದರೂ ಗೊತ್ತಾದರೆ ಅರ್ಧ ಸಮಸ್ಯೆ ಮುಗಿದಂತೆ... ಸದಾನಂದನ ಕಾಲ್ ರೆಕಾರ್ಡ್‌ನಿಂದ ಆ ಕರೆಯ ವಿವರಗಳನ್ನು ತೆಗಿಯಲು ಹೇಳಿದ್ದೇನೆ.'

'ಸರ್, ಇನ್ನೊಂದು ವಿಚಾರ... ಬೆಳಿಗ್ಗೆಯಿಂದ ಸದಾನಂದ ಇಲ್ಲಿಗೆ ಬಂದಿಲ್ಲ, ಫೋನ್ ಸಹಿತಾ ಮಾಡಿಲ್ಲ... ಅವರ ಮನೆ ಮುಂದೆ ಒಬ್ಬ ಇನ್‌ಫಾರ್ಮರ್ ಕೂಡ ಇದ್ದಾನೆ... ಅವರು ಮನೆಯಿಂದ ಹೊರಗಡೆ ಕೂಡ ಬಂದಿಲ್ಲ ಎಂದು ಇನ್‌ಫಾರ್ಮರ್ ಹೇಳಿದ.'

ಅಷ್ಟರಲ್ಲಿ ಪೂಜಾರಿಯ ಫೋನ್ ಸದ್ದು ಮಾಡಿತು. ಆ ಕಡೆಯಲ್ಲಿ ಇದ್ದಿದ್ದು ಇನ್ನೊಂದು ಏರಿಯಾದ ಇನ್‌ಸ್ಪೆಕ್ಟರ್.

'ಸರ್, ನಮ್ಮ ಏರಿಯಾದ ರಾಜ ಕಾಲುವೆಯಲ್ಲಿ ಒಂದು ಹುಡುಗಿಯ ಶವ ಸಿಕ್ಕಿದೆ. ಮುಖ ನೋಡಿದರೆ ನಿನ್ನೆ ನೀವು ಕಳುಹಿಸಿದ ಯುವತಿಯ ಚಿತ್ರವನ್ನೇ ಹೋಲುತ್ತಿದೆ. ಮೇಲುನೋಟಕ್ಕೆ ತಲೆಯ ಹಿಂಭಾಗಕ್ಕೆ ಹೊಡೆತ ಬಿದ್ದಿರುವುದರಿಂದ ಸಾವು ಆಗಿರಬಹುದು ಅನ್ನುವ ಅನುಮಾನ. ನಿಮಗೆ ಆ ಹುಡುಗಿಯ ಫೋಟೊ ಕಳುಹಿಸಿದ್ದೇನೆ, ನೋಡಿ. ಅವರ ಕಡೆಯವರನ್ನು ಕರೆಸಿದರೆ ಗುರುತು ಸಿಗಬಹುದು' ಎಂದ.

'ಕೆಟ್ಟ ಸುದ್ದಿ ಜಗದೀಶ, ಮಂಗಳಾ ಶವ ಸಿಕ್ಕಿದೆ' ಫೋನ್‌ನಲ್ಲಿ ಬಂದಿದ್ದ ಫೋಟೊ ನೋಡುತ್ತಾ ಹೇಳಿದ ಪೂಜಾರಿ.

'ಸರ್, ನಾವು ಎಲ್ಲಿಯೋ ಎಡವಿದ್ದೇವೆ ಸರ್...' ಜಗದೀಶ ಪಶ್ಚಾತ್ತಾಪದಿಂದ ನುಡಿದ.

'ಮಂಗಳಾಳ ಶವದ ಮುಂದೆ ಅಳುತ್ತಾ ನಿಂತಿದ್ದ ಸುಮತಿಯನ್ನು ನೋಡಿ ಒಂದು ಕ್ಷಣ ಗಾಬರಿ ಆದ ಪೂಜಾರಿ. ಒಂದು ಸಣ್ಣ ಮಿಸ್ಸಿಂಗ್ ಕೇಸ್... ಕಿಡ್ನಾಪ್ ಕೇಸ್ ಆಗಿ, ಈಗ ಕೊಲೆ ಕೇಸ್ ಆಗಿದೆ.